ಇ) ಗ್ರಾಮೀಣ ಪ್ರದೇಶಗಳಲ್ಲಿ ಬಿ.ಪಿ.ಒ ಗಳನ್ನು ಸ್ಥಾಪಿಸಲು ರೂ. 90-00 ಲಕ್ಷಗಳ ಸಹಾಯಧನವನ್ನು ಶ್ರೀರಂಗಪ್ಪಣ (ಮಂಡ್ಯ ಜಿಲ್ಲೆ) ಸಾಲಿಗ್ರಾಮ (ಹಾಸನ ಜಿಲ್ಲೆ) ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ), ಶಿಗ್ಗಾಂವ (ಹಾವೇರಿ ಜಿಲ್ಲೆ) ಘಟಕಗಳಿಗೆ ಬಿಡುಗಡೆ ಮಾಡಲಾಗಿದೆ (ದಿನಾಂಕ: 10.03.2010 ರ ವರೆಗೆ).

ಇದಲ್ಲದೆ ಈ ಕೆಳಕಂಡ ಪ್ರದೇಶಗಳಲ್ಲಿ 15 ಬಿಪಿಒ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

1. ನಂಜನಗೂಡು (ಮೈಸೂರು ಜಿಲ್ಲೆ)
2. ದೇವದುರ್ಗ (ರಾಯಚೂರು ಜಿಲ್ಲೆ)
3. ಪಾವಗಡ (ತುಮಕೂರು ಜಿಲ್ಲೆ)
4. ಮುಂಡರಗಿ (ಗದಗ ಜಿಲ್ಲೆ)
5. ಚಿಕ್ಕಬಳ್ಳಾಪುರ (ಚಿಕ್ಕಬಳ್ಳಾಪುರ ಜಿಲ್ಲೆ)
6. ಶಿರಸಿ (ಉತ್ತರ ಕನ್ನಡ ಜಿಲ್ಲೆ)
7. ಹೊಸದುರ್ಗ (ಚಿತ್ರದುರ್ಗ ಜಿಲ್ಲೆ)
8. ಹುಳಿಯಾರ್ (ತುಮಕೂರು ಜಿಲ್ಲೆ)
9. ಜಗಳೂರು (ದಾವಣಗೆರೆ ಜಿಲ್ಲೆ)
10. ಮುದ್ದೇನಹಳ್ಳಿ (ಚಿಕ್ಕಬಳ್ಳಾಪುರ ಜಿಲ್ಲೆ)
11. ಲಕ್ಷ್ಮೇಶ್ವರ (ಗದಗ ಜಿಲ್ಲೆ)
12. ಹುಣಸೂರು (ಮೈಸೂರು ಜಿಲ್ಲೆ)
13. ತೀರ್ಥಹಳ್ಳಿ (ಶಿವಮೊಗ್ಗ ಜಿಲ್ಲೆ)
14. ಇಲಕಲ್ (ಬಾಗಲಕೋಟೆ ಜಿಲ್ಲೆ)
15. ಶಂಕರಘಟ್ಟ (ಚಿಕ್ಕಮಗಳೂರು ಜಿಲ್ಲೆ)

ಎ.ಪಿ.ಎಂ.ಸಿ. ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಟ್ಟಡಗಳು

608 (822) ಡಾ: ಸುಧಾಕರ್ ಎಂ.ಸಿ. (ಚಿಂತಾಮಣಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕು, ಕಸಬಾ ಹೋಬಳಿ ನೆಕ್ಕುಂದಿ ಗ್ರಾಮದ ಸರ್ವೆ ನಂ.196 ರಲ್ಲಿ 1.31 ಎಕರೆ ಸರ್ಕಾರಿ ಭೂಮಿ ಇದ್ದು, 1 ಎಕರೆ ಎ.ಪಿ.ಎಂ.ಸಿ ಮಾರ್ಕೆಟ್ ಸಂತೆ ಮೈದಾನಕ್ಕಾಗಿ ಹಾಗೂ 0.31 ಗುಂಟೆ

ಜಮೀನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಕಟ್ಟಡಕ್ಕೆ ಮಂಜೂರು ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಬಂದಿದ್ದಲ್ಲಿ, ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ;

ಇ) ಸಲ್ಲಿಸಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಸಲ್ಲಿಸಿರುವುದಿಲ್ಲ.

ಇ) ಪ್ರಸ್ತಾಪಿತ ಜಮೀನಿನಲ್ಲಿ ಅನಧಿಕೃತವಾದ 7 ಕಟ್ಟಡಗಳಿದ್ದು, ಅದನ್ನು ತೆರವುಗೊಳಿಸಲು ದಿ: 29.09.2009 ರಂದು ಖುಲ್ಲಾ ನೋಟೀಸು ನೀಡಲಾಗಿರುತ್ತದೆ. ನಿಯಮಾನುಸಾರ ಖುಲ್ಲಾ ಪಡಿಸಿ ಸಂಬಂಧಿಸಿದ ಇಲಾಖೆಗಳು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದಲ್ಲಿ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುವುದು.

ಹೊಸ ತಾಲ್ಲೂಕುಗಳ ರಚನೆ

610 (1066) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳ ರಚನೆಯ ಸಂಬಂಧಾಗಿ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ನೀಡಲು ಇಲ್ಲಿಯವರೆಗೆ ಎಷ್ಟು ಸಮಿತಿಗಳನ್ನು ರಚಿಸಲಾಗಿದೆ ಮತ್ತು ಈ ಸಮಿತಿಗಳು ನೀಡಿರುವ ವರದಿಯ ಶಿಫಾರಸ್ಸಿನಲ್ಲಿ ಯಾವ ಯಾವ ಸ್ಥಳಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಮಾಡಲಾಗುವುದು, ಹೊಸ ತಾಲ್ಲೂಕುಗಳ ರಚನೆಗೆ ಇರುವ ಮಾನ ದಂಡಗಳೇನು?

ಆ) ಹೊಸ ತಾಲ್ಲೂಕುಗಳ ರಚನೆಯ ವಿಷಯದಲ್ಲಿ ಸರ್ಕಾರ ಯಾವ ತುರ್ತು ಕ್ರಮಗಳನ್ನು ಕೈಗೊಳ್ಳಲಿದೆ?